ಶ್ರೀ ಬಿ.ಆರ್. ನೀಲಕಂಠಪ್ಪ: ಇದರ ಅಂದಾಜು ನಕ್ಷೆ ಮಾಡುವುದಕ್ಕೆ ಒಂದು ವರ್ಷವಾಗಿದೆ, ಮತ್ತೆ ಇದನ್ನು ಇಂಪ್ಲಿಮೆಂಟ್ ಮಾಡುವುದು 5 ವರ್ಷವಾಗುತ್ತದೆ, ಇದು 120 ಎಕರೆ ಪ್ರದೇಶದಲ್ಲಿರುವ ಅತ್ಯಂತ ಸಣ್ಣ ಕೆರೆಯಾಗಿರುವುದು ಕಾಲಮಿತಿಯನ್ನು ಕಡಿಮೆ ಇಟ್ಟುಕೊಂಡು ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕು.

ಈಗಾಗಲೇ ತರೀಕೆರೆ ತಾಲ್ಲೂಕಿನ ಎರಡು ಕೆರೆಗಳಲ್ಲಿ ಹೂಳನ್ನು ತೆಗೆದುಬಿಡಲಾಗಿದೆ, ಕಳೆದ ಸಾರಿಯ ಹಣವನ್ನು ಪೂರ್ಣ ಮಾಡುತ್ತಿಲ್ಲ, ಅದನ್ನು ಯಾವಾಗ ಮಾಡುತ್ತೀರಿ? ಅರಣ್ಯ ಇಲಾಖೆಯಿಂದ ಜಮೀನನ್ನು ತೆಗೆದುಕೊಳ್ಳಲು ಏನು ಪ್ರಯತ್ನ ಮಾಡಿದ್ದೀರಿ? ಅರಣ್ಯ ಇಲಾಖೆಗೆ ಏನಾದರು ತಾವು ಪತ್ರವನ್ನು ಬರೆದಿದ್ದಿರಾ?

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಚಿಕ್ಕಮಗಳೂರು ವ್ಯಾಪ್ತಿಯಲ್ಲಿ ಬರುವ ಅರಣ್ಯ ಇಲಾಖೆಯ ವಿಭಾಗಕ್ಕೆ ದಿನಾಂಕ: 17-2-2001ರಲ್ಲಿ ಈಗಾಗಲೇ ಪತ್ರವನ್ನು ಬರೆದಿದ್ದೇವೆ, ಅಲ್ಲಿಂದ ಕ್ಲಿಯರೆನ್ಸ್ ಬಂದ ತಕ್ಷಣ ನಾವು ಮಂಜೂರಾತಿ ಕೊಟ್ಟು ಕೆಲಸ ಆರಂಭ ಮಾಡುತ್ತೇವೆ.

ಬಡತನ ರೇಖೆಗಿಂತ ಕೆಳ ವರ್ಗದ ಕುಟುಂಬಗಳ ಗುರುತಿಸಿರುವ ಪಟ್ಟಿಯನ್ನು ಪುನರ್ ಪರಿಶೀಲನೆ:

8 (361) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯ ಸರ್ಕಾರವು ಬಡತನ ರೇಖೆಗಿಂತ ಕೆಳ ವರ್ಗದ ಜನರನ್ನು ಗುರುತಿಸುವ ಪಟ್ಟಿಯನ್ನು ಪುನರ್‌ಪರಿಶೀಲಿಸುವ ಕಾರ್ಯ ಮಾಡಲು (ಸರ್ಕಾರ) ನಿರ್ಧರಿಸಿದೆಯೇ;

2) ನಿರ್ಧರಿಸಿದ್ದಲ್ಲಿ ಸದರಿ ಪಟ್ಟಿ ತಯಾರಿಕಾ ಕಾರ್ಯ ನಡೆದಿದೆಯೆ; ಸದರಿ ಪಟ್ಟಿಗೆ ಸೇರ್ಪಡೆಗೊಳ್ಳಲು ಇರುವ ಮಾನ ದಂಡಗಳೇನು ಮತ್ತು ಅರ್ಹತೆಗಳೇನು;

3) ಹಾಗಿದ್ದಲ್ಲಿ, ಸದರಿ ಯೋಜನೆಯಡಿ ಬಿ.ಪಿ.ಎಲ್. ಪಟ್ಟಿಗೆ ಒಳಪಟ್ಟಿರುವ ಕುಟುಂಬಗಳ ಸಂಖ್ಯೆಯನ್ನು ಜಿಲ್ಲಾವಾರು, ತಾಲ್ಲೂಕುವಾರು ವಿವರ ಒದಗಿಸುವುದು:

4) ಸದರಿ ಪಟ್ಟಿಗಳು ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ, ನಾಗರೀಕ ಸರಬರಾಜು ರಾಜ್ಯ ಸಚಿವರು)

1) ಹೌದು.

2) ಹೌದು. ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳ ವಾರ್ಷಿಕ ಆದಾಯ ರೂ. 12,000-00 ಕ್ಕಿಂತ ಕಡಿಮೆ ಹಾಗೂ ನಗರ ಪ್ರದೇಶಗಳಲ್ಲಿನ ವಾರ್ಷಿಕ ಆದಾಯ ರೂ. 17,000-00 ಕ್ಕಿಂತ ಕಡಿಮೆ ಇದ್ದು ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳು ಸದರಿ ಪಟ್ಟಿಯಲ್ಲಿ ಸೇರ್ಪಡೆಗೊಳ್ಳಲು ಅರ್ಹರೆಂದು ಮಾನದಂಡಗಳನ್ನು ನಿರ್ಧರಿಸಲಾಗಿದೆ.

3) ತಾಲ್ಲೂಕುವಾರು, ಜಿಲ್ಲಾವಾರು ಬಿ.ಪಿ.ಎಲ್. ಪಟ್ಟಿ ತಯಾರಿಕೆ ಹಂತದಲ್ಲಿ ಇರುವುದರಿಂದ ಈ ಮಾಹಿತಿಗಳು ಸದ್ಯಕ್ಕೆ ಲಭ್ಯವಿರುವುದಿಲ್ಲ.

4) ರಾಜ್ಯಾದ್ಯಂತ ಗ್ರಾಮವಾರು ಬಿ.ಪಿ.ಎಲ್. ಕುಟುಂಬಗಳನ್ನು ಆಯಾ ಗ್ರಾಮ ಸಭೆಗಳ ಮೂಲಕ ಗುರುತಿಸಲು ಕ್ರಮವಹಿಸುತ್ತಿರುವುದರಿಂದ ತಾಲ್ಲೂಕುವಾರು, ಜಿಲ್ಲಾವಾರು ಬಿ.ಪಿ.ಎಲ್ ಪಟ್ಟಿ ಸದ್ಯಕ್ಕೆ ಲಭ್ಯವಿರುವುದಿಲ್ಲ.

ಶ್ರೀ ಎ. ನಾರಾಯಣ ಸ್ವಾಮಿ: ಮಾನ್ಯ ಅಧ್ಯಕ್ಷರೆ, ಸರ್ಕಾರ ತನ್ನ ಉತ್ತರದಲ್ಲಿ ಸಭೆಗಳು ಕಾರ್ಡ್ ಕೊಡಲು ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡುತ್ತಿವೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಜನವರಿ ತಿಂಗಳಲ್ಲಿ ಇಡೀ ರಾಜ್ಯದಲ್ಲಿ ಗ್ರಾಮಸಭೆಗಳು ನಡೆಯಿತು; ಗ್ರಾಮ ಸಭೆ ನಡೆಯುತ್ತಿದೆ ಎಂದು ನನಗೂ ನೋಟೀಸ್ ಬಂದಿತ್ತು. ಗ್ರಾಮ ಸಭೆ ಏತಕ್ಕೆ ನಡೆಯುತ್ತಿದೆ ಎಂದು ಪಂಚಾಯಿತಿ ಛೇರ್ಮನ್ ಅನ್ನು ಕೇಳಿದರೆ, ಗೊತ್ತಿಲ್ಲ, ಸರ್ಕಾರ ಆದೇಶ ಹೊರಡಿಸಿದೆ ಗ್ರಾಮ ಸಭೆಗಳನ್ನು ನಡೆಸಬೇಕಂತೆ ಎಂದು ಹೇಳಿದರು. ವಿಶೇಷವೇನೆಂದು ಕೇಳಿದರೆ, ಏನು ಗೊತ್ತಿಲ್ಲವೆಂದು ಹೇಳಿದರು. ಗ್ರಾಮಸಭೆಗಳಿಗೆ ಶೇಕಡ 100ಕ್ಕೆ 60ರಷ್ಟು ಜನರ್ಯಾರು ಹಾಜರಾಗಲಿಲ್ಲ, ನಾಲ್ಕು ಗೋಡೆಗಳ ಮಧ್ಯೆ ಸಭೆ ನಡೆಯಿತು. ಸಭೆಯಲ್ಲಿ ಎಲ್ಲಾ ಸದಸ್ಯರು ಗೈರುಹಾಜರಿದ್ದರು, ಇದರ ಅವಶ್ಯಕತೆ ಏನಿತ್ತು? ಎರಡನೆಯದಾಗಿ ಕಂದಾಯ ಇಲಾಖೆಯವರು ಏತಕ್ಕೆ ತಿರಸ್ಕಾರ ಮಾಡಿದರು, ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಜವಾಬ್ದಾರಿ ಸರ್ಕಾರದಲ್ಲಿ ಇರಲಿಲ್ಲವೆ? ಅವರು ತಿರಸ್ಕಾರ ಮಾಡಿದಾಗ ಸರ್ಕಾರ ಏಕಾಏಕಿಯಾಗಿ ಏತಕ್ಕೆ ಒಪ್ಪಿಕೊಂಡಿತು ಎಂಬುದಕ್ಕೆ ಮಂತ್ರಿಗಳು ಉತ್ತರ ನೀಡಬೇಕು.

ಶ್ರೀ ಡಿ.ಬಿ. ಇನಾಂದಾರ್: ಗ್ರಾಮ ಸಭೆ ನಡೆಯುವುದು ಬಿಡುವುದು ಆಹಾರ ಇಲಾಖೆಗೆ ಸಂಬಂಧಿಸಿದ ವಿಷಯವಲ್ಲ, ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳಲ್ಲಿ ಕೇಳಬೇಕು.

ಶ್ರೀ ಎ. ನಾರಾಯಣಸ್ವಾಮಿ: ಹಾಗಾದರೆ ಆಹಾರ ಇಲಾಖೆಯನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಗೆ ವರ್ಗಾಯಿಸಬೇಕಾಗುತ್ತದೆ. ಅಲ್ಲಿ ಇರುವ ಕಂದಾಯ ಇಲಾಖೆಯ ನೌಕರರು, ಅಧಿಕಾರಿಗಳು, ಫಲಾನುಭವಿಗಳನ್ನು ಲಿಸ್ಟ್ ಮಾಡಲು ಹೋಗುವುದಿಲ್ಲವೆಂದರೆ ಆ ಕೆಲಸವನ್ನು ಯಾರು ಮಾಡಬೇಕು, ಅಲ್ಲಿರುವವನಿಗೆ ಮನೆ ಇಲ್ಲದಿರಬಹುದು, ಗುಡಿಸಲು ಇಲ್ಲದಿರಬಹುದು, ಅಂತಹವರಿಂದಲೇ ಇಲ್ಲಿ ಸರ್ಕಾರ ನಡೆಯುತ್ತಿರುವುದು, ಅಂತಹವನ ಹತ್ತಿರ ಹೋಗಿ ಲಿಸ್ಟ್ ಮಾಡಲಾಗುವುದಿಲ್ಲ, ಕಛೇರಿಯಲ್ಲಿ ಕುಳಿತೆ ಎಲ್ಲಾ ಮಾಡುತ್ತೇವೆಂದರೆ ಹೇಗೆ? ಈ ಬಗ್ಗೆ ಕಂದಾಯ ಇಲಾಖೆ ಹಾಗೂ ಸರ್ಕಾರ ಉತ್ತರ ಕೊಡಬೇಕಾಗಿದೆ.

ಶ್ರೀ ಡಿ.ಬಿ. ಇನಾಂದಾರ್: ಗ್ರಾಮಸಭೆಗಳು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ವ್ಯವಸ್ಥೆಯನ್ನು ರೂಪಿಸಿಕೊಟ್ಟಿರುವುದರಿಂದ ಗ್ರಾಮಸಭೆಗಳಿಗೆ ಅತೀ ಮಹತ್ವವಾದಂಥ ಅಧಿಕಾರ ಬಂದಿದೆ. ಈ ಅಧಿಕಾರವನ್ನು ಚಲಾಯಿಸಲು ಅಲ್ಲಿರತಕ್ಕಂಥ ಜನ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಗ್ರಾಮಸಭೆಗಳು ಕೇವಲ ಒಂದು ಕೊಠಡಿಯಲ್ಲಿ ಕುಳಿತು ಫಲಾನುಭವಿಗಳನ್ನು

ಆಯ್ಕೆ ಮಾಡುತ್ತಿವೆ ಎಂದು ಮಾನ್ಯ ಸದಸ್ಯರು ಹೇಳಿದರು. ಆ ರೀತಿ ಏನಾದರೂ ಆಗಿದ್ದರೆ, ಅವರು ಅದನ್ನು ನನಗೆ ತಿಳಿಸಿದರೆ, ಅದರ ಬಗ್ಗೆ ಪುನಃ ವಿಚಾರಣೆ ಮಾಡಲು ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಿಗೆ ತಿಳಿಸುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ: ಕಂದಾಯ ಇಲಾಖೆಯವರು ಸರ್ಕಾರೀ ಆದೇಶವನ್ನು ಏಕೆ ತಿರಸ್ಕಾರ ಮಾಡಿದ್ದಾರೆ ಎನ್ನುವ ನನ್ನ ಪ್ರಶ್ನೆಗೆ ಮಂತ್ರಿಗಳು ಉತ್ತರವನ್ನೇ ಕೊಡುತ್ತಿಲ್ಲ.

ಶ್ರೀ ಡಿ.ಬಿ. ಇನಾಂದಾರ್: ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳನ್ನು ಉಪಯೋಗ ಮಾಡಿಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ ತಾವು ಆದೇಶವನ್ನು ಹೊರಡಿಸಿದ್ದೇವೆ. ಕಂದಾಯ ಇಲಾಖೆಯ ಬಗ್ಗೆ ಕೇಳಬೇಕಾಗಿದ್ದರೆ ತಾವು ಕಂದಾಯ ಮಂತ್ರಿಗಳನ್ನೇ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್: ನಾವು ನೋಡುವಂತೆ, ನಮ್ಮ ಮತ್ತು ನಿಮ್ಮ ಅನುಭವಕ್ಕೆ ಬಂದಿರುವಂತೆ, ಗ್ರಾಮಸಭೆಗಳಲ್ಲಿ 'ಆಶ್ರಯ' ಇತ್ಯಾದಿ ಯೋಜನೆಗಳ ಫಲಾನುಭವಿಗಳನ್ನಾಗಿ ಆರಿಸುವುದು ದೊಡ್ಡದೊಡ್ಡ ವ್ಯಕ್ತಿಗಳನ್ನೇ. ಚೀಟಿ ಎತ್ತಿದರೂ ಅವರ ಹೆಸರೇ ಬರುವುದರಿಂದ ನಾವು ಬಯ್ಯಿಸಿಕೊಳ್ಳುತ್ತಿದ್ದೇವೆ. ಅದಕ್ಕಾಗಿ ನನ್ನ ಒಂದು ಸಲಹೆ ಎಂದರೆ, ಅಧಿಕಾರಿಗಳಿಂದ ಸರ್ವೆ ಮಾಡಿ ತಯಾರಾಗಿರತಕ್ಕಂಥ ಲಿಸ್ಟ್‌ಅನ್ನು ಗ್ರಾಮಸಭೆಗಳಲ್ಲಿ ಇಡಬೇಕು. ಅದರಲ್ಲಿ ಅರ್ಹರಾದವರು ಯಾರಾದರೂ ಬಿಟ್ಟು ಹೋಗಿದ್ದರೆ ಸೇರಿಸಬೇಕು, ಅನರ್ಹರಿದ್ದರೆ ತೆಗೆಯಬೇಕು. ಗ್ರಾಮಸಭೆಗಳಿಗೆ ಬಡವರು ಯಾರೂ ಬರುವುದಿಲ್ಲ. ಅವರು ದುಡಿಯಲು ಹೋಗಿರುತ್ತಾರೆ. ಅಲ್ಲಿ ದೊಡ್ಡದೊಡ್ಡವರೇ ಇರುತ್ತಾರೆ. 'ಆಶ್ರಯ' ಮನೆಗಳೂ ಹೀಗೇ ಆಗುತ್ತವೆ, ಇವುಗಳೂ ಹಾಗೇ ಆಗುತ್ತವೆ. ಇದಕ್ಕೆ ಶಾಸಕರು ಬಯ್ಯಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ, ನನ್ನ ಈ ಸಲಹೆಯನ್ನು ತಾವು ಆಚರಣೆಗೆ ತರುತ್ತೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ: ಇದೇ ಮಾತನ್ನು ಹೇಳಿ, ಅತೀ ಮುಖ್ಯವಾದಂಥ ಈ ಕಾರ್ಯಕ್ರಮವನ್ನು ಜಾರಿಗೆ ತರಲು ಆರು ತಿಂಗಳಾಯಿತು. ಅಧಿಕಾರಿಗಳು ಸರ್ವೆ ಮಾಡಬೇಕು ಎನ್ನುವ ಅಭಿಪ್ರಾಯ ಒಂದು ದೃಷ್ಟಿಯಿಂದ ಅವಶ್ಯಕ. ಎರಡು ವರ್ಷಗಳ ಹಿಂದೆ ಮಾನ್ಯ ಮಂತ್ರಿಗಳು ಏನು ಮಾಡಿದ್ದರು ಎಂದರೆ, ಬಡತನದ ರೇಖೆಗಿಂತ ಕೆಳಗಿರತಕ್ಕಂಥ ಜನರು ಎಂದು ಮಾಡಿರುವ ಪಟ್ಟಿಯಲ್ಲಿ ತಪ್ಪು ಇರಬಹುದೆಂದು, ಆ ಪಟ್ಟಿಯನ್ನು ಗ್ರಾಮಸಭೆಗಳ ಮುಂದೆ ಇಟ್ಟು, ಅದರಲ್ಲಿ ತಪ್ಪು ಕಂಡುಬಂದರೆ ಮತ್ತು ಹೆಸರು ಬಿಟ್ಟು ಹೋಗಿದ್ದರೆ ಅದನ್ನು ಗ್ರಾಮಸಭೆಗಳವರು ಹೇಳುತ್ತಾರೆ. ಆಷ್ಟಕ್ಕೆ ನಾವು ಗ್ರಾಮಸಭೆಗಳನ್ನು ಉಪಯೋಗಿಸುತ್ತಿದ್ದೇವೆ. ಅಂದರೆ ಆ ಪಟ್ಟಿಯನ್ನು ಗ್ರಾಮಸಭೆಗಳಲ್ಲಿ ಇಡುತ್ತೇವೆ, ಅದರಲ್ಲಿ ತಪ್ಪೇನಾದರೂ ಇದ್ದರೆ ಅದನ್ನು ಹೇಳಿ, ಬಿಟ್ಟು ಹೋಗಿರುವಂಥ ಹೆಸರುಗಳನ್ನು ಸೇರಿಸಲು ಶಿಫಾರಸ್ಸು ಮಾಡಬೇಕು. ನಂತರ ಅಸಿಸ್ಟೆಂಟ್ ಕಮೀಷನರ್‌ರವರು ಅದನ್ನು ನೋಡಿ, ಕ್ರಮಬದ್ಧವಾಗಿದ್ದರೆ ಅಂಥ ಹೆಸರನ್ನು ಸೇರಿಸುತ್ತಾರೆ, ಅಕ್ರಮವಾಗಿ ಸೇರಿದಂಥ ಹೆಸರನ್ನು ತೆಗೆಯುತ್ತಾರೆ. ಬಹಿರಂಗವಾಗಿ ಈ ಕೆಲಸ ನಡೆಯಲಿ ಎನ್ನುವ ಉದ್ದೇಶದಿಂದ ಗ್ರಾಮಸಭೆಗಳನ್ನು ಇದಕ್ಕೆ ಉಪಯೋಗಿಸುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಹಾಗೆ ಸಭೆಗಳು ನಡೆಯುತ್ತಿಲ್ಲ. ಆ ಪಟ್ಟಿಯನ್ನು ಗ್ರಾಮಸಭೆಗಳಲ್ಲಿ ಇಡುತ್ತಿಲ್ಲ, ಬಡವರಿಗೆ ಅನ್ಯಾಯವಾಗುತ್ತಿದೆ. ಗ್ರಾಮಸಭೆಗಳನ್ನು ಮಾಡಿದ್ದು ಒಳ್ಳೆಯ ಉದ್ದೇಶದಿಂದ, ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅಲ್ಲಿ ಅದರ ವಿರುದ್ಧವಾಗಿ ಕೆಲಸ ನಡೆಯುತ್ತಿದೆ.

ಶ್ರೀ ಎಂ.ವೈ. ಘೋರ್ಪಡೆ: ಇದಕ್ಕಾಗಿ ಸ್ಪೆಷಲ್ ಗ್ರಾಮಸಭೆಗಳನ್ನು ಕರೆಯಿರಿ ಎಂದು ನಾವು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಅಧಿಕಾರಿಗಳು ಸರ್ವೆ ಮಾಡಿ ಮಾಡಿದ ಲಿಸ್ಟ್‌ಅನ್ನು ಗ್ರಾಮ ಸಭೆಗಳಲ್ಲಿ ಇಡುತ್ತಿಲ್ಲ. ಇದನ್ನು ತಾವು ಪರಿಶೀಲಿಸಿದ್ದೀರಾ?

ಶ್ರೀ ಎಂ.ವೈ. ಘೋರ್ಪಡೆ: ಅದನ್ನು ಗ್ರಾಮಸಭೆಗಳಲ್ಲಿ ಇಡಲೇಬೇಕು. ಅದನ್ನು ತಪ್ಪಿಸಲು ಆಗುವುದಿಲ್ಲ.

ಶ್ರೀ ವಿ. ಪಾಪಣ್ಣ: ಗ್ರಾಮಸಭೆಗಳ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡುವಂಥಾದ್ದನ್ನು ಆಹಾರ ಇಲಾಖೆಯವರು ಮಾಡುತ್ತಿದ್ದಾರೆ. ಆದಾಯದ ಪ್ರಮಾಣಪತ್ರವನ್ನು ಕೊಡುವಂಥವರು ತಹಶೀಲ್ದಾರ್. ಕಂದಾಯ ಇಲಾಖೆಯ ಅಧಿಕಾರಿಗಳ್ಯಾರೂ ಹೋಗದಿದ್ದರೆ ಫಲಾನುಭವಿಗಳನ್ನು ಗುರುತಿಸಲು ಗ್ರಾಮ ಸಭೆಗಳಿಗೆ ಹೇಗೆ ಸಾಧ್ಯ? ಇಂಥವನಿಗೆ 12 ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ಇದೆ ಎಂದು ಗುರುತಿಸಿ ಸರ್ಟಿಫಿಕೇಟ್ ಕೊಡಬೇಕಾಗಿರುವವರು ಕಂದಾಯ ಇಲಾಖೆಯವರು. ಆದರೆ ಕಂದಾಯ ಇಲಾಖೆಯವರು ಬಹಿಷ್ಕಾರ ಹಾಕಿದ್ದಾರೆ. ಹೀಗಿರುವಾಗ, ಆಹಾರ ಇಲಾಖೆಯವರು ಹೇಗೆ ಫಲಾನುಭವಿಗಳನ್ನು ಗುರುತಿಸುತ್ತಾರೆ? ಇದು ಇಡೀ ರಾಜ್ಯದಲ್ಲೇ ಲೋಪವಾಗುತ್ತಿದೆ, ಹಾಲಿ ಇರುವ ಪಟ್ಟಿಯನ್ನು ತೆಗೆದುಕೊಂಡು ಹೋಗುತ್ತಾರೆ. ಅದರಲ್ಲಿ ಯಾರು ಬೇಕು, ಯಾರು ಬೇಡ ಎಂದು ತೀರ್ಮಾನ ಮಾಡುತ್ತಾರೆ, ಹೀಗೆ ನಾಲ್ಕು ಗೋಡೆಗಳ ಮಧ್ಯೆ ತಯಾರಾಗತಕ್ಕಂಥ ಪಟ್ಟಿ ಬರುತ್ತಿದೆ. 12 ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ಇದೆ ಎನ್ನುವ ಸರ್ಟಿಫಿಕೇಟನ್ನು ಆಹಾರ ಇಲಾಖೆಯವರು ಕೊಡಲು ಆಗುವುದಿಲ್ಲ. ಆದ್ದರಿಂದ ಕಂದಾಯ ಇಲಾಖೆಯವರು ಅದಕ್ಕೆ ಬಹಿಷ್ಕಾರ ಹಾಕಿದ್ದಾರೆಯೇ, ಇಲ್ಲವೇ ಎನ್ನುವುದನ್ನು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಸಿ. ಗುರುಸ್ವಾಮಿ: ಮಾನ್ಯ ನಾರಾಯಣಸ್ವಾಮಿಯವರು ಕೇಳಿದಂಥ ಪ್ರಶ್ನೆಗೆ, ಗ್ರಾಮಸಭೆ ವಿಚಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರನ್ನು ಕೇಳಬೇಕು ಎಂದು ಆಹಾರ ಮಂತ್ರಿಗಳು ಹೇಳಿದರು. ಫಲಾನುಭವಿಗಳನ್ನು ಆಯ್ಕೆ ಮಾಡಲು ಗ್ರಾಮಸಭೆಗಳಿಗೆ ಬಹಳ ಒತ್ತು ಕೊಡಲಾಗಿದೆ. ಆದರೆ, ಇದರಲ್ಲಿ ಆಹಾರ ಇಲಾಖೆಗೆ ಸೇರಿದ ಅಧಿಕಾರಿಗಳ ಜವಾಬ್ದಾರಿ ಇಲ್ಲವೆ? ಆಹಾರ, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಈ ಮೂರೂ ಇಲಾಖೆಯ ಅಧಿಕಾರಿಗಳು ಸೇರಿಕೊಂಡರೆ ಇದನ್ನು ಸಮರ್ಪಕವಾಗಿ ಮಾಡಬಹುದು. ಆದರೆ ನೀವು ಅವರ ಮೇಲೆಯೇ ಜವಾಬ್ದಾರಿ ಹಾಕಿರತಕ್ಕಂಥಾದ್ದು ಸರಿಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಡಿ.ಬಿ. ಇನಾಂದಾರ್: ಇದರ ಬಗ್ಗೆ ನಾವು ಈಗಾಗಲೇ ಒಂದು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಏಕೆಂದರೆ, ಈಗಾಗಲೇ ಒಂದು ಪಟ್ಟಿ ತಯಾರಾಗಿದೆ. ಆ ಪಟ್ಟಿಯಲ್ಲಿ ಅನರ್ಹರು ಸೇರಿದ್ದಾರೆ ಎಂದು ಬಹಳಷ್ಟು ದೂರುಗಳು ಬಂದ ನಂತರ, ಆ ಪಟ್ಟಿಯನ್ನು ಗ್ರಾಮಸಭೆಯಲ್ಲಿಟ್ಟು ಅನರ್ಹರನ್ನು ಹುಡುಕತಕ್ಕಂಥ ಕಾರ್ಯಕ್ರಮವನ್ನು ಅಲ್ಲಿ ಮಾಡಬೇಕಾಗಿದೆ. ಇನ್ನೂ ಯಾರಾದರೂ ಅರ್ಹರು ಉಳಿದಿದ್ದರೆ ಅವರು ವೈಯಕ್ತಿಕವಾಗಿ ಅರ್ಜಿ ಕೊಡಬೇಕು. ನಂತರ ಅಸಿಸ್ಟೆಂಟ್ ಕಮೀಷನರ್ ಮುಖಾಂತರ ಆ ಅರ್ಜಿಯನ್ನು ಪರಿಶೀಲಿಸಲಾಗುವುದು. ಅದರ ಬಗ್ಗೆ ವಿಚಾರಣೆ ಮಾಡಿದ ನಂತರ ಅವರು ಅರ್ಹರಿದ್ದರೆ, ಅವರಿಗೂ ಕೊಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಡಿ.ಎ. ಸದಾನಂದಗೌಡ: ಗ್ರಾಮಸಭೆಗಳಲ್ಲಿ ಎಲ್ಲಾ ತರಹದ ಫಲಾನುಭವಿಗಳ ಆಯ್ಕೆಯನ್ನು ಮಾಡಬೇಕಾಗುತ್ತದೆ. ಇದಕ್ಕೆ ಬೇರೆಬೇರೆ ಇಲಾಖೆಗಳ ಕೋ-ಆರ್ಡಿನೇಷನ್ ಬೇಕಾಗುತ್ತದೆ. ಇದಾಹರಣೆಗೆ, ಹಳದಿ ಕಾರ್ಡ್ ವಿಚಾರದಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಗೆ ಕಂದಾಯ ಇಲಾಖೆಯ ಸಹಕಾರ ಬೇಕು. ಗ್ರಾಮಸಭೆಗಳನ್ನು ನಡೆಸಲು ಪಂಚಾಯತ್ ವ್ಯವಸ್ಥೆ ಬೇಕು. ಆದರೆ ಈ ಎಲ್ಲಾ ವ್ಯವಸ್ಥೆಗಳಲ್ಲಿ ಕೋ-ಆರ್ಡಿನೇಷನ್ ಇಲ್ಲ. ಗ್ರಾಮಸಭೆಗಳು ವಿಫಲವಾಗಲು ಪ್ರಮುಖ ಕಾರಣವೆಂದರೆ, ವಿವಿಧ ಇಲಾಖೆಗಳಲ್ಲಿನ ಕೋ-ಆರ್ಡಿನೇಷನ್ನಿನ ಕೊರತೆ. ಇದನ್ನು ಹೇಗೆ ಸರಿಮಾಡಬಹುದು ಮತ್ತು ಇದರ ಬಗ್ಗೆ ಸ್ಪಷ್ಟವಾಗಿ ಎಲ್ಲಾ ಇಲಾಖೆಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ, ಪರಿಪೂರ್ಣತೆ ಬರುವ ಹಾಗೆ ಮಾಡಿದರೆ ಇದು ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್: ನಿಮ್ಮ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ: ಗ್ರಾಮೀಣ ಪ್ರದೇಶದ ಗ್ರಾಮಸಭೆಗಳ ಬಗ್ಗೆ ತಾವು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ನಗರ ಪ್ರದೇಶಗಳಲ್ಲಿ ಮಾಡುವ ಬಿ.ಪಿ.ಎಲ್. ಲಿಸ್ಟಅನ್ನು ಟಿ.ಎಂ.ಸಿ. ಅಥವಾ ಸಿ.ಎಂ.ಸಿ. ಅಥವಾ ನಗರಪಾಲಿಕೆಗಳ ಸಮಿತಿಯಲ್ಲಿಟ್ಟು ಪಾಸ್ ಮಾಡಬೇಕು ಎಂದು ಆದೇಶ ಇದೆ. ಸಿ.ಎಂ.ಸಿ., ಪುರಸಭೆಗಳ ವ್ಯಾಪ್ತಿಯಲ್ಲಿ ಈ ಲಿಸ್ಟಅನ್ನು ಮಾಡುತ್ತಿರುವಂಥವರು ಮಹಿಳಾ ಸಮುದಾಯ ಸಂಘಗಳು. ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆಯಲ್ಲಿ ಅನುಸರಿಸುವ ಕ್ರಮಗಳನ್ನೇ ಇಲ್ಲೂ ಮಾಡುತ್ತಾರೆ. ನಗರ ಪ್ರದೇಶಗಳಲ್ಲಿ ಇಂಥ ಪಟ್ಟಿಯನ್ನು ಯಾವುದೇ ಅಧಿಕಾರಿಗಳು ಮಾಡುತ್ತಿಲ್ಲ. ಎಲ್ಲರೂ ತಿರಸ್ಕಾರ ಮಾಡಿದ್ದಾರೆ. ಹಾಗಾದರೆ ನಗರ ಪ್ರದೇಶಗಳಲ್ಲಿ ಬಿ.ಪಿ.ಎಲ್. ಲಿಸ್ಟ್‌ಗಿಂತ ಕೆಳಗಿರುವ ಜನರೇ ಇಲ್ಲವೇ?

ಶ್ರೀ ಡಿ.ಬಿ. ಇನಾಂದಾರ್: ನಗರ ಪ್ರದೇಶಗಳಲ್ಲಿನ ಸ್ಲಂ ಮತ್ತು ನೋಟಿಫೈಡ್ ಏರಿಯಾಗಳಲ್ಲಿರತಕ್ಕಂಥ ಜನರಿಗೆ ನಾವು ಹಸಿರು ಕಾರ್ಡ್ ಮುಖಾಂತರ ಕಡಿಮೆ ದರದಲ್ಲಿ ಆಹಾರ ಧಾನ್ಯ ವಿತರಣೆ ಮಾಡುವಂಥ ವ್ಯವಸ್ಥೆ ಇದೆ. ಗ್ರಾಮೀಣ ಪ್ರದೇಶದ ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ನಗರ ಪ್ರದೇಶಗಳಲ್ಲಿನ ಸ್ಲಂ ಮತ್ತು ನೋಟಿಫೈಡ್ ಏರಿಯಾಗಳ ಜನರಿಗೆ ಕೂಡ ಈ ವ್ಯವಸ್ಥೆಯನ್ನು ಎಕ್ಸ್‌ಟೆಂಡ್ ಮಾಡುತಕ್ಕಂಥ ವಿಚಾರ ಸರ್ಕಾರದಲ್ಲಿ ಇದೆ.

ಶ್ರೀ ಜೆಚ್.ಪಿ. ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಇದ್ದಂಥ ಕಾಲದಲ್ಲಿ ಬಿ.ಪಿ.ಎಲ್. ಲಿಸ್ಟ್ ತಯಾರು ಮಾಡುವುದಕ್ಕೆ ಈ ಗ್ರಾಮಪಂಚಾಯಿತಿಯ ಕಾರ್ಯದರ್ಶಿಯವರಿಗೆ ವಹಿಸಿದ್ದು ದೋಷಪೂರಿತವಾದಂಥ ವರದಿಯನ್ನು ಕೊಟ್ಟಿತ್ತೆಂದು ಅದನ್ನು ತಿರಸ್ಕರಿಸಿ ಈಗಿನ ಸರ್ಕಾರ ಹೊಸದಾಗಿ ಬಿ.ಪಿ.ಎಲ್. ಲಿಸ್ಟ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿರುವುದು ತಿಳಿದಿರತಕ್ಕಂಥ ವಿಚಾರವಾಗಿದೆ. ಆದರೆ ಹಿಂದಿನ ಸರ್ಕಾರ ಮಾಡಿದ್ದಂಥ ಕೆಲಸವನ್ನೇ ಪುನಃ ಈಗಿನ ಸರ್ಕಾರ ಮಾಡಿ, ಬಿ.ಪಿ.ಎಲ್. ಲಿಸ್ಟ್‌ನ್ನು ತಯಾರುಮಾಡತಕ್ಕಂಥ ಅಧಿಕಾರವನ್ನು ಪಂಚಾಯಿತಿ ಕಾರ್ಯದರ್ಶಿಗೆ ಮಾತ್ರ ಕೊಡಲಾಗಿದೆ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ಕಂದಾಯ ಇಲಾಖೆಯ ಸರ್ಟಿಫಿಕೇಟ್ ಇಲ್ಲದೆ ಬಿ.ಪಿ.ಎಲ್. ಲಿಸ್ಟ್‌ನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಬಹಳ ಬಲಿಷ್ಟವಾದುದು ಗ್ರಾಮಸಭೆ. ಕರ್ನಾಟಕ ರಾಜ್ಯಾದ್ಯಂತ ಗ್ರಾಮಸಭೆಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಬಲಿಷ್ಟ ಮಾಡುವುದಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಅನೇಕ ಪಂಚಾಯತಿಗಳಿಗೆ ಕಾರ್ಯದರ್ಶಿಗಳೇ ಇಲ್ಲದಿರುವುದರಿಂದ ಈ ಸಭೆಗಳು ನಡೆಯುತ್ತಿಲ್ಲ. ಇದನ್ನು ಬಲಿಷ್ಟಗೊಳಿಸುವುದಕ್ಕೆ ಸರ್ಕಾರ ಏನು ವ್ಯವಸ್ಥೆ ಕೈಗೊಂಡಿದೆ? ಮತ್ತು ಗ್ರಾಮಸಭೆ ಮುಖಾಂತರ ಮಾತ್ರ ಆರಿಸತಕ್ಕಂಥದ್ದು ತದನಂತರ ಎ.ಸಿ. ಯವರಿಂದ ಅಪೀಲು ಹೋಗತಕ್ಕಂಥದ್ದು ಸರಿಯಿಲ್ಲ.

(ಗೊಂದಲ)

(ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಲು ಹಲವು ಸದಸ್ಯರು ಒಂದೇ ಸಲಕ್ಕೆ ಎದ್ದುನಿಂತು ಅವಕಾಶ ಕೋರಿ ಒತ್ತಾಯಿಸಲು ಪ್ರಾರಂಭಿಸಿದಾಗ ಗೊಂದಲವಾಯಿತು).

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೋತ್ತರ ವೇಳೆ ಬಗ್ಗೆ ಸ್ವಲ್ಪ ಇನ್ನೂ ಹೆಚ್ಚು ಸ್ಟ್ರಕ್ಚರಲ್ ಮ್ಯಾನರ್‌ನಲ್ಲಿ ನಾವು ಹೋಗಬೇಕಾಗುತ್ತದೆ. ಒಂದೊಂದು ಪ್ರಶ್ನೆಗೆ ಅದರ ಮಹತ್ವದ ಆಧಾರದ ಮೇಲೆ ಇಂತಿಷ್ಟು ಪ್ರಶ್ನೆಗಳಿಗೆ ಇಂತಿಷ್ಟು ಸಮಯಾವಕಾಶ ಕೊಡತಕ್ಕಂಥ ಸಂಪೂರ್ಣ ಸ್ವಾತಂತ್ರ್ಯ ತಮಗೆ ಇದೆ. ಮಾನ್ಯ ಸಭಾಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ಮಾನ್ಯ ಅಧ್ಯಕ್ಷರಿಗೆ ಗೌರವವನ್ನು ಕೊಡಬೇಕು. ಯಾವ ಯಾವ ಪ್ರಶ್ನೆಗೆ ಎಷ್ಟು ಸಮಯಾವಕಾಶವೆಂದು ಅದರ ಮಹತ್ವ, ಅದರ ವ್ಯಾಪಕತೆಯನ್ನು ಅರಿತು ತೀರ್ಮಾನ ಮಾಡುತ್ತಾರೆ. ಅದನ್ನು ಪ್ರಶ್ನೆ ಮಾಡತಕ್ಕಂಥದ್ದು ಸಂಸದೀಯ ನಮ್ಮ ಸಂಪ್ರದಾಯಕ್ಕೆ ವಿರುದ್ಧವಾದದ್ದು ಎಂದು ನಾನು ಅಭಿವ್ಯಕ್ತಪಡಿಸುತ್ತೇನೆ.